2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**129/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಸತೀಶ | ಪಿಡಬ್ಲೂ - 4 |
| ತಂದೆಯ ಹೆಸರು | - | ಬೊಬೇಗೌಡ | ಸಿಡಬ್ಲೂ - 4 |
| ವಯಸ್ಸು | - | 37 ವರ್ಷ | |
| ಉದ್ಯೋಗ | - | ವ್ಯವಸಾಯ | |
| ವಾಸ ಸ್ಥಳ | - | ಹೀಚುವಳ್ಳಿ, ಮಡ್ಡಿಕೆರೆ ಗ್ರಾಮ, ಮೂಡಿಗೆರೆ ತಾಲ್ಲೂಕು | |

ದಿನಾಂಕಃ 18-01-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ಮೃತ 2 ನೇ ಆರೋಪಿಯ ಪರಿಚಯ ಕೂಡ ಇರುತ್ತದೆ. ಈ ದಿನ 1 ನೇ ಆರೋಪಿ ಗೈರು ಹಾಜರಾಗಿದ್ದು (1 ನೇ ಆರೋಪಿತನ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅದರಲ್ಲಿ ಆತನ ಗುರುತಿಸುವಿಕೆಯನ್ನು ಅಲ್ಲಗಳಿಯುವುದಿಲ್ಲ ಎಂದು ತಿಳಿಸಿರುತ್ತಾರೆ.) ಆತನ ಪರಿಚಯ ಇರುತ್ತದೆ. ಫ್ರಾಸಾ.1 ರಘು ಮತ್ತು ಫ್ರಾಸಾ.2 ಪೂರ್ಣೇಶ್ ರವರು ಗೊತ್ತು ಅವರು ನಮ್ಮ ಊರಿನವರಾಗಬೇಕು.

2. ದಿಃ 23.02.2013 ರಂದು ಸುಮಾರು ಬೆಳಿಗ್ಗೆ 11 ಗಂಟೆಗೆ ನಾವು ನಮ್ಮ ಊರಿನಲ್ಲಿ ಅಂಗಡಿಯ ಹತ್ತಿರ ಇದ್ದೆವು. ಹೀಚುವಳ್ಳಿ ಗ್ರಾಮದಲ್ಲಿ ಮಡಿವಾಳ ಸಮಾಜದವರ ಸ್ಮಶಾನಕ್ಕೆಂದು ಸರ್ವೆ ನಂಬರ್ 47 ರಲ್ಲಿ 30 ಗುಂಟೆ ಜಾಗ ಇರುತ್ತದೆ. ಅಂದು ಬೆಳಿಗ್ಗೆ 11 ಗಂಟೆ ಸುಮಾರಿಗೆ ಕಂದಾಯ

ಅಧಿಕಾರಿಗಳು ಮತ್ತು ಪೊಲೀಸರು ಸದರಿ ಜಾಗಕ್ಕೆ ಬಂದಿದ್ದರು ಮತ್ತು ಅಲ್ಲಿ ಕಾಫಿ ಕುಯಲ್ಲಿಕ್ಕೆ ಮಾಡಲು ಕೃಷಿ ಕಾರ್ಮಿಕರು ಬಂದಿದ್ದರು. ಆ ಸಮಯದಲ್ಲಿ 1 ನೇ ಆರೋಪಿ ತಮ್ಮ ಕಾರಿನಲ್ಲಿ ಬಂದರು. 1 ನೇ ಆರೋಪಿ ಪ್ರಾಸಾ.1 ರಘು ರವರನ್ನು ಉದ್ದೇಶಿಸಿ ಸೂಳೇ ಮಗನೆ, ಬೋಳಿ ಮಗನೆ ಎಂದು ಬೈದರು. ನಂತರ 1 ನೇ ಆರೋಪಿ 4 ನೇ ಆರೋಪಿಗೆ ಕತ್ತಿಗಳನ್ನು ತೆಗೆದುಕೊಂಡ ಬಾ ಪ್ರಾಸಾ.1 ಈತನನ್ನು ಕೊಲೆ ಮಾಡೋಣ ಎಂದು ಹೇಳಿದನು. ಅದರಂತೆ 4 ನೇ ಆರೋಪಿ ಮನೆಯಿಂದ ಕತ್ತಿಗಳನ್ನು ತಂದರು. ಆಗ 1 ನೇ ಆರೋಪಿ 4 ನೇ ಆರೋಪಿಯ ಕಡೆಯಿಂದ ಒಂದು ಕತ್ತಿಯನ್ನು ಹಿಸುದುಕೊಂಡು ಪ್ರಾಸಾ.1 ರಘು ಇವರ ಕುತ್ತಿಗೆಗೆ ಕಡಿಯಲು ಬಂದಾಗ ಸದರಿ ರಘು ಕೈಯನ್ನು ಅಡ್ಡ ಮಾಡಿರುತ್ತಾರೆ. ಆಗ ಆತನ ಹೆಬ್ಬೆರಳು ಮತ್ತು ಮಧ್ಯೆ ಬರಳಿಗೆ ಪೆಟ್ಟಾಗಿರುತ್ತದೆ. ಅವರ ಬೆರಳುಗಳಿಂದ ರಕ್ತ ಸೊರಿರುತ್ತದೆ. ನಂತರ 1 ನೇ ಆರೋಪಿ ತಮ್ಮ ಕಾರನ್ನು ನಮ್ಮ ಮೇಲೆ ಹತ್ತಿಸುವ ಸಲುವಾಗಿ 3-4 ಸಲ ಹಿಂದಕ್ಕೆ ಮುಂದಕ್ಕೆ ಮಾಡಿದನು. ನಂತರ ಎಲ್ಲ ಜನರು ಆ ಕಡೆ ಈ ಕಡೆ ಓಡಿ ಹೋದರು. ಅಲ್ಲದೇ ಪ್ರಾಸಾ.2 ಪೂರ್ಣೇಶ್ ಇವರಿಗೆ 3 ನೇ ಆರೋಪಿಯು ಮರದ ಕುಂಟೆ ಮತ್ತು ಕಲ್ಲಿನಿಂದ ಅವರ ಕೈ ಮತ್ತು ಕಾಲಿಗೆ ಹೊಡೆದಿರುತ್ತಾರೆ. ನಂತರ ಪ್ರಾಸಾ.1 ಮತ್ತು 2 ರವರನ್ನು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. 1 ನೇ ಆರೋಪಿಯ ಕಾರು ನಂಬರ್ ಕ.ಎ.18/ಎಂ.ಕೆ.100 ಇರುತ್ತದೆ. ಮತ್ತು ಅವರು ತಮ್ಮ ಕಾರನ್ನು ಹಿಂದಕ್ಕೆ ಮತ್ತು ಮುಂದಕ್ಕೆ ಮಾಡುವಾಗ ಅವರ ಕಾರು ರಸ್ತೆ ಬದಿಯ ಗೆರೆಗೆ ತಾಗಿ ಕಾರಿನ ಹಿಂಭದಿ ಗ್ಲಾಸ್ ಹೊಡೆದು ಹೋಗಿರುತ್ತದೆ. ಕಾರಿನ ಭಾಗವು Scratch ಆಗಿರುತ್ತದೆ. ಈ ಕುರಿತಂತೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು

ನೀಡಿರುತ್ತೇನೆ.

3. ಆರೋಪಿಗಳು ಫ್ರಾಸಾ.1 ರಘು, ಫ್ರಾಸಾ.2 ಪೂರ್ಣೇಶ್ ರವರ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 4 ಎಂದು ಗುರುತಿಸಲಾಗಿದೆ.

4. ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಮತ್ತು ಗೈರು ಹಾಜರಾದ 1 ನೇ ಆರೋಪಿಗಳೇ ಫ್ರಾಸಾ.1 ಮತ್ತು 2 ರವರ ಮೇಲೆ ಆ ದಿನ ಹಲ್ಲೆ ಮಾಡಿದವರಾಗಿರುತ್ತಾರೆ.

<u>ಪಾಟೀ ಸವಾಲು ಶ್ರೀ ಎಸ್.ಹೆಚ್.ಎಂ.ಕೆ. ವಕೀಲರಿಂದ – 1, 3 ಮತ್ತು 4 ನೇ ಆರೋಪಿತರ ಪರವಾಗಿ</u>

5. ನನ್ನ ಮೇಲೆ 1 ನೇ ಆರೋಪಿ ಮೃತ 2 ನೇ ಆರೋಪಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸುಳ್ಳು. ಹಳೇಕೆರೆ ಗ್ರಾಮಕ್ಕೂ ಮತ್ತು ಮಡ್ಡಿಕೆರೆ ಗ್ರಾಮಕ್ಕೂ ಸುಮಾರು 1 ವರೆ ಕಿ.ಮೀ ದೂರವಾಗುತ್ತದೆ. ಹೀಚುವಳ್ಳಿ ಗ್ರಾಮಕ್ಕೂ ಮತ್ತು ಮಡ್ಡಿಕೆರೆ ಗ್ರಾಮಕ್ಕೂ ಸಹ ಸುಮಾರು 1 ವರೆ ಕಿ.ಮೀ ದೂರವಾಗುತ್ತದೆ. ಆ ದಿನ ಘಟನೆ ನಡೆದ ಸ್ಥಳದಲ್ಲಿ ಸುಮಾರು 20-25 ಜನ ಸೇರಿದ್ದರು. ನನ್ನ ಮನೆ ಘಟನೆ ನಡೆದ ಸ್ಥಳದಿಂದ ಸುಮಾರು ಅರ್ಧ ಕಿ.ಮೀ ದೂರವಿರುತ್ತದೆ. ಸರ್ವೆ ನಂಬರ್ 47 ರಲ್ಲಿ ಮಡಿವಾಳ ಸಮಾಜಕ್ಕೆ 30 ಗುಂಟೆ ಜಮೀನು ಮಂಜೂರಾಗಿದ್ದು, ಬೇರೆಯವರಿಗೆ ಆದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಆ ಮಡಿವಾಳ ಜನಾಂಗಕ್ಕೆ ಸೇರಿದವನಲ್ಲ ಎಂದರೆ ಸರಿ. ಒಂದು ಜನಾಂಗಕ್ಕೆ ಒಂದು ಜಾಗ ಮೀಸಲಿಟ್ಟರೆ ಅದನ್ನು ಅದೇ ಜನಾಂಗದವರು ಉಪಯೋಗಿಸುತ್ತಾರೆ ಎಂದರೆ ಸರಿ.

6. ಮೃತ 2 ನೇ ಆರೋಪಿಗೆ ಸರ್ಕಾರದಿಂದ ಸರ್ವೆ ನಂಬರ್ 47 ರಲ್ಲಿ ಜಮೀನು ಮಂಜೂರಾಗಿದ್ದು ಮತ್ತು ಅದರಲ್ಲಿ ಅವರು ಕಾಫಿ ಬೆಳೆದಿರುತ್ತಾರೆ. ಮತ್ತು ಅದಕ್ಕೆ ಬೇಲಿ ಹಾಕಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಅವರಿಗೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಮನೆಯ ಹತ್ತಿರ ಜಮೀನು ಇರುತ್ತದೆ. ನನಗೆ ಸರ್ವೆ ನಂಬರ್ 47 ರಲ್ಲಿ ಯಾವುದೇ ಹಿತಾಸಕ್ತಿ ಇಲ್ಲ ಎಂದರೆ ಸರಿ. ಸರ್ವೆ ನಂಬರ್ 47 ರಿಂದ ಸುಮಾರು ಅರ್ಧ ಕಿ.ಮೀ ಅಂತರದಲ್ಲಿ ನಮ್ಮ ಹಿಡುವಳಿ ಜಮೀನು ಇರುತ್ತದೆ. ಅಲ್ಲಿ ಸುಮಾರು 9 ಸರ್ವೆ ನಂಬರ್ ಗಳು ಇದ್ದು ಎಲ್ಲವುಗಳನ್ನು ಹೇಳಲು ನನಗೆ ಈಗ ಆಗುವುದಿಲ್ಲ. ಘಟನೆ ಯಾವ ದಿನ ನಡೆಯಿತು ಎಂಬುದು ನನಗೆ ನೆನಪಿಲ್ಲ. ಪ್ರಸನ್ನ ರವರು ತಮ್ಮ ಬುಲೇರೋ ಕಾರಿನಲ್ಲಿ ಅಲ್ಲಿಗೆ ಆಗಮನಿಸಿದರು. 1 ನೇ ಆರೋಪಿಯು ಮನೆಗೆ ಹೋಗಬೇಕಾದರೆ ಅದೇ ರಸ್ತೆಯಿಂದ ಹೋಗಿ ಬರಬೇಕು ಎಂದರೆ ಸರಿ. ಸರ್ವೆ ನಂಬರ್ 47 ಇದು ಗೌಡಹಳ್ಳಿ ಮತ್ತು ಮೂಡಿಗೆರೆ ಗೆ ಕೂಡುವ ಮುಖ್ಯ ರಸ್ತೆಗೆ ಹೊಂದುಕೊಂಡತೆ ಇದೆ ಎಂದರೆ ಸರಿ. ಆ ರಸ್ತೆಯಲ್ಲಿ ಸಾಮಾನ್ಯವಾಗಿ ಸಾರ್ವಜನಿಕರು ಮತ್ತು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಘಟನೆ ನಡೆದ ದಿನ ಹೀಚುವಳ್ಳಿ, ಮಡ್ಡಿಕೆರೆ ಮತ್ತು ಹಳ್ಳಿಕೆರೆ ಊರಿನ ಜನರು ಬಿಟ್ಟರೆ ಬೇರೆ ಯಾರು ಸೇರಿರಲಿಲ್ಲ. ಫ್ರಾಸಾ.1 - ರಘು, ಫ್ರಾಸಾ.2 -ಪೂರ್ಣೇಶ್ ಫ್ರಾಸಾ.3 - ವೆಂಕಟೇಶ್ ಮತ್ತು ಇತರ 9 ಜನರ ಮೇಲೆ 1 ನೇ ಆರೋಪಿ ದಾಖಲಿಸಿದ ಹಲ್ಲೆ ಪ್ರಕರಣ ಇದೆ ಎಂದರೆ ಸರಿ. ನನ್ನ ಮೇಲೆ ಪ್ರಕರಣ ದಾಖಲಾಗಿದ್ದರು ಸಹ ಮತ್ತು ನಾನು ಈ ದಿನ ನ್ಯಾಯಾಲಯಕ್ಕೆ ಎಸ್.ಸಿ.14/2016 ರಲ್ಲಿ ಹಾಜರಾಗಿದ್ದರು

ಸಹ ನ್ಯಾಯಾಲಯದ ಮುಂದೆ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ಅದರಲ್ಲಿ ನಾನು ಆರೋಪಿ ಇರುವುದು ನಿಜ. ಆದರೆ ಈ ಪ್ರಕರಣದಲ್ಲಿ ನಾನು ಸಾಕ್ಷಿಧಾರನಾಗಿರುತ್ತೇನೆ. 1 ನೇ ಆರೋಪಿಗೂ ಮತ್ತು ಫ್ರಾಸಾ.1 ರವರಿಗೂ ಏನಾದರು ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ಘಟನೆ ನಡೆದ ದಿನ ಆರೋಪಿ ಬಂದು ಫ್ರಾಸಾ.1 ರವರನ್ನು ಅವಚ್ಯಾ ಶಬ್ಧಗಳಿಂದ ಬೈದಿಲ್ಲ ಮತ್ತು 1 ನೇ ಆರೋಪಿಯು ಫ್ರಾಸಾ.1 ಮತ್ತು ಫ್ರಾಸಾ.2 ರವರನ್ನು ಕೊಲೆ ಮಾಡಲು ಮೃತ 2 ನೇ ಆರೋಪಿಗೆ ಕತ್ತಿಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದ್ದು ಸುಳ್ಳು ಎಂದರೆ ಸರಿಯಲ್ಲ.

7. ಫ್ರಾಸಾ.1 ರಘು ರವರು ರೈತ ಸಂಘದಲ್ಲಿ ಮತ್ತು ಸಾಹಿತ್ಯ ಪರಿಷತ್ತಿನಲ್ಲಿ ಸಕ್ರಿಯವಾಗಿದ್ದಾರೆ ಎಂದರೆ ಸರಿ. ಘಟನೆ ನಡೆದ ದಿನ 1 ನೇ ಆರೋಪಿಯು ಕತ್ತಿಯಿಂದ ಫ್ರಾಸಾ.1 ರವರ ಕುತ್ತಿಗೆಗೆ ಹಲ್ಲೆ ಮಾಡಲು ಬಂದಾಗ ಫ್ರಾಸಾ.1 ರವರು ತನ್ನ ಕೈಯನ್ನು ಅಡ್ಡ ಹಿಡಿದಾಗ ಸದರಿ ಹಲ್ಲೆಯಿಂದ ಆತನ ಕೈ ಬೆರಳುಗಳಿಗೆ ರಕ್ತಗಾಯವಾಗಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು ತನ್ನ ಕಾರನ್ನು 3-4 ಸಲ ಹಿಂದೆ ಮುಂದೆ ಚಲನೆ ಮಾಡಿದಾಗ ಹಿಂಭಾಗದ ಗ್ಲಾಸು ಗೆರೆಗೆ ತಾಗಿ ವಡೆದು ಹೋಗಿದ್ದು ಸುಳ್ಳು ನಾವು ಅದನ್ನು ವಡೆದು ಹಾಕಿದ್ದೇವೆ ಎಂದರೆ ಸರಿಯಲ್ಲ. ಮತ್ತು 1 ನೇ ಆರೋಪಿಯ ಮೇಲೆ ನಾವೆಲ್ಲರು ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ.

8. ಘಟನೆ ನಡೆದ ದಿನ ನಾವು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದೇವೆ ಮತ್ತು ಘಟನೆ ನಡೆದ 2-3 ದಿನಗಳ ನಂತರ ಮಹಜರ್ ಮಾಡುವಾಗಲು

ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಮು.ಮಾ.1 ರಿಂದ 4 ಗಳನ್ನು ಘಟನೆಯಾದ ನಂತರ ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಕಂದಾಯ ಅಧಿಕಾರಿ ಮತ್ತು ಪೊಲೀಸರು ಘಟನೆ ಮುಗಿಯುವವರೆಗೂ ಸ್ಥಳದಲ್ಲಿ ಇದ್ದರು. ಈಗ ನ್ಯಾಯಾಲಯದ ಮುಂದೆ ತೋರಿಸಿದ ಮು.ಮಾ.1 ಮತ್ತು 2 ಗಳು ಸಮಾನ್ಯವಾಗಿ ಕಾಫಿ ಬೆಳೆಯುವ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ಮು,ಮಾ.1 ಮತ್ತು 2 ರ ಮೇಲೆ ಯಾವುದೇ ವಿಶೇಷ ಗುರುತು ಇಲ್ಲ. ಮು.ಮಾ.1 ಮತ್ತು 2 ಗಳನ್ನು ಘಟನೆ ನಡೆದ ದಿನ ನೋಡಿದ್ದು ಬಿಟ್ಟರೆ ಈ ದಿನವೇ ನ್ಯಾಯಾಲಯದಲ್ಲಿ ನೋಡಿದ್ದೇನೆ ಎಂದರೆ ಸರಿ. ಘಟನೆ ನಡೆದ ದಿನ ಮು.ಮಾ.1 ಮತ್ತು 2 ಯಾರ ಯಾರ ಕೈಯಲ್ಲಿ ಇದ್ದವು ಎಂಬುದು ನನಗೆ ಹೇಳಲು ಆಗುವುದಿಲ್ಲ. ನನಗೂ ಮತ್ತು 1 ನೇ ಆರೋಪಿ ಯವರಿಗೂ ವೈಮನಸ್ಸು ಇದೆ ಎಂದರೆ ಇಲ್ಲ. ನಾನು ಮೂಲತಃ ಮಡ್ಡಿಕೆರೆ ಗ್ರಾಮದವನು. ಮಡ್ಡಿಕೆರೆ ಗ್ರಾಮಕ್ಕೆ ಹೋಗುವ ಹಳೆಯ ರಸ್ತೆಯನ್ನು ಹೊಸದಾಗಿ ಮಾಡಿರುತ್ತಾರೆ. ಮಡ್ಡಿಕೆರೆ ಲಕ್ಷಣಗೌಡರು ನಮಗೆ ಗೊತ್ತು. ಮಡ್ಡಿಕೆರೆ ಗ್ರಾಮದ ರಸ್ತೆಯ ವಿಚಾರವಾಗಿ ಈ ಹಿಂದೆ 1 ನೇ ಆರೋಪಿ ಲಕ್ಷಣಗೌಡ , ನನ್ನ ಮತ್ತು ಇತರರ ಮೇಲೆ ಒಂದು ಸಿವಿಲ್ ದಾವೆಯನ್ನು ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿ ಯಾವುದೇ ಘಟನೆ ನಡೆದಿಲ್ಲ ಮತ್ತು ಫ್ರಾಸಾ.1 ರಘು ರವರ ಮಾತು ಕೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಮಾ